KAMS510035852016

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ನಂಜನಗೂಡು.**

**ಉಪಸ್ಥಿತರುಃ ಶ್ರೀಮತಿ.ಸರಿತ ಕುಮಾರಿ.ಎ.ಎಂ.,**

ಬಿ.ಎ. ಎಲ್‌ಎಲ್.ಬಿ.,

**ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ನಂಜನಗೂಡು.**

**ದಿನಾಂಕಃ 05 ನೇ ಆಗಸ್ಟ್, 2026**

**ಸಿ.ಸಿ./1466/2016**

ಪಿರ್ಯಾದುದಾರರು — ರಾಜ್ಯದ ಪರವಾಗಿ
ಕವಲಂದೆ ಠಾಣಾ ಪೊಲೀಸರು.
(ಪ್ರತಿನಿಧಿಸುವವರುಃ ಸಹಾಯಕ ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರು

1. ಸುಬ್ಬನಾಯಕ, ಬಿನ್ ಮಾದನಾಯಕ- **ಮೃತಪಟ್ಟಿರುತ್ತಾರೆ**
2. ಮಹದೇವನಾಯಕ, ಬಿನ್ ದೊಡ್ಡವೀರನಾಯಕ, 40 ವರ್ಷ
3. ಮಣಿಕುಮಾರ, ಬಿನ್ ದೊಡ್ಡವೀರನಾಯಕ, 32 ವರ್ಷ
4. ಚಿನ್ನಸ್ವಾಮಿನಾಯಕ, ಬಿನ್ ಮಾದನಾಯಕ, 45 ವರ್ಷ
5. ಬಸಪ್ಪ ಉ. ಬಸವನಾಯಕ, ಬಿನ್ ರಂಗನಾಯಕ, 42 ವರ್ಷ -
6. ಗೋಪಾಲನಾಯಕ, ಬಿನ್ ಬೆಲ್ಲನಾಯಕ, 40 ವರ್ಷ
7. ರಾಜನಾಯಕ, ಬಿನ್ ಮೆಣಸನಾಯಕ, 40 ವರ್ಷ
8. ರಾಚಪ್ಪ, ಬಿನ್ ಸಿದ್ದನಾಯಕ, 23 ವರ್ಷ

9. ಸಿದ್ದರಾಜು, ಬಿನ್ ರಂಗನಾಯಕ, 27 ವರ್ಷ
10. ನಿಂಗನಾಯಕ, ಬಿನ್ ಲೇ.ಮಾದನಾಯಕ, 45 ವರ್ಷ
11. ನಂಜನಾಯಕ, ಬಿನ್ ಲೇ. ಚೆನ್ನಬಸವನಾಯಕ, 60 ವರ್ಷ
12. ಗೋವಿಂದ, ಬಿನ್ ಬೆಲ್ಲನಾಯಕ, 30 ವರ್ಷ
13. ಸಿದ್ದಲಿಂಗನಾಯಕ, ಬಿನ್ ತಮ್ಮಯ್ಯನಾಯಕ, 27 ವರ್ಷ
14. ಮಹೇಶ, ಬಿನ್ ಚಿಕ್ಕಬೆಲ್ಲನಾಯಕ, 36 ವರ್ಷ
15. ಮಹೇಶ, ಬಿನ್ ಕಾಡನಾಯಕ, 36 ವರ್ಷ
16. ಮಣಿಕಂಠ, ಬಿನ್ ರಂಗನಾಯಕ, 30 ವರ್ಷ
17. ಪುಟ್ಟಸ್ವಾಮಿ, ಬಿನ್ ಚಿಕ್ಕಮಾದನಾಯಕ, 36 ವರ್ಷ
18. ಮಂಜು, ಬಿನ್ ರಂಗಯ್ಯ, 28 ವರ್ಷ
19. ರಂಗಸ್ವಾಮಿ, ಬಿನ್ ದಾಸನಾಯಕ, 37 ವರ್ಷ
20. ನಾರಾಯಣ, ಬಿನ್ ಬೆಲ್ಲನಾಯಕ, 25 ವರ್ಷ
21. ಪಾಪಣ್ಣ, ಬಿನ್ ಕಾಡನಾಯಕ, 40 ವರ್ಷ
22. ಸುರೇಶ, ಬಿನ್ ದೊಡ್ಡಬಸವನಾಯಕ, 30 ವರ್ಷ
23. ರಾಮಾಚಾರಿ, ಬಿನ್ ಜವರನಾಯಕ, 22 ವರ್ಷ
24. ಮಹೇಂದ್ರ, ಬಿನ್ ನಾಗನಾಯಕ, 23 ವರ್ಷ
25. ಸಿದ್ದನಾಯಕ ಉ. ಸಿದ್ದರಾಜು, ಬಿನ್ ಕರಿನಾಯಕ, 55 ವರ್ಷ

(ಪ್ರತಿನಿಧಿಸುವವರುಃಆರೋಪಿತರ ಪರ **ಶ್ರೀ. ಎಂ.ಬಿ .,** ವಕೀಲರು)

# -:: ತೀರ್ಪು ::-

ಕವಲಂದೆ ಠಾಣಾ ಪೊಲೀಸರು ಈ ಮೊಕದ್ದಮೆಯನ್ನು ಆರೋಪಿತರ ವಿರುದ್ಧ ದಾಖಲು ಮಾಡಿ, ಆರೋಪಿತರು ಭಾರತ ದಂಡ ಸಂಹಿತೆಯ ಕಲಂ. 143,147,148,324,326,323 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಆರೋಪಿಸಿರುತ್ತಾರೆ.

2. **ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ:-**

ದಿನಾಂಕ 01.03.2016 ರಂದು ಕವಲಂದೆ ಪೊಲೀಸ್ ಠಾಣಾ ಸರಹದ್ದು ಹಳೇಪುರ ಗ್ರಾಮದಲ್ಲಿ ಉಪ್ಪಾರಶೆಟ್ಟರ ಜನಾಂಗದವರ ಮಾರಮ್ಮನ ಹಬ್ಬದ ಪ್ರಯುಕ್ತ ಮಧ್ಯಾಹ್ನ 2.00 ಗಂಟೆಗೆ ಮಾರಮ್ಮನ ಮೆರವಣಿಗೆಯನ್ನು ಪ್ರಾರಂಭಿಸಿ ಅವರ ಬೀದಿಗಳಲ್ಲಿ ಮೆರವಣಿಗೆಯನ್ನು ಮಾಡಿಕೊಂಡು ಗ್ರಾಮದ ಬಸ್ ಸ್ಟಾಂಡ್ ಸರ್ಕಲ್ ಗೆ ಮಧ್ಯಾಹ್ನ 3.00 ಗಂಟೆಗೆ ಬಂದಾಗ ನಾಯಕ ಜನಾಂಗದವರಾದ 1 ರಿಂದ 25 ನೇ ಆರೋಪಿತರು ಅಕ್ರಮಕೂಟ ಸೇರಿಕೊಂಡು ಉಪ್ಪಾರಶೆಟ್ಟರ ಜನಾಂಗದವರನ್ನು ಉದ್ದೇಶಿಸಿ ಸರ್ಕಲ್ ಗೆ ಏಕೆ ಬಂದಿದ್ದಿರಿ ಅಂತಾ ಗಲಾಟೆ ಮಾಡಿ ಮಾತಿಗೆ ಮಾತು ಬೆಳೆದು ರಸ್ತೆಯಲ್ಲಿ ಬಿದ್ದಿದ್ದ ಕಲ್ಲು ದೊಣ್ಣೆಗಳನ್ನು ತೆಗೆದುಕೊಂಡು ಚಾಸಾ.1 ರವರಿಗೆ 1 ನೇ ಆರೋಪಿ ದೊಣ್ಣೆಯಿಂದ ಬಲದ ಕಡೆಯ ಹಣೆಗೆ ಮತ್ತು ಮೈ ಕೈ ಗೆ ಹೊಡೆದು ರಕ್ತಗಾಯ ಮಾಡಿದ್ದು ಚಾಸಾ.2 ರವರಿಗೆ 2 ನೇ ಆರೋಪಿ ಕಲ್ಲನ್ನು ಬೀಸಿದಾಗ ಕಲ್ಲು 03 ಹಲ್ಲುಗಳಿಗೆ ಬಿದ್ದು ಸಡಿಲಗೊಡಿದ್ದು, ಚಾಸಾ.3 ರವರಿಗೆ 3 ನೇ ಆರೋಪಿ ರವರು ದೊಣ್ಣೆಯಿಂದ ಎದೆಗೆ ಹೊಡೆದು ನೋವುಂಟು ಮಾಡಿದ್ದು, ಚಾಸಾ.4 ರವರಿಗೆ 4 ನೇ ಆರೋಪಿ

ಕಲ್ಲನ್ನು ಬೀಸಿದಾಗ ಬಲ ಮಂಡಿಗೆ ಬಿದ್ದು ಗಾಯವಾಗಿದ್ದು, ಚಾಸಾ.5 ರವರಿಗೆ 4 ನೇ ಆರೋಪಿ ಬೀಸಿದ ಕಲ್ಲನ್ನು 5 ನೇ ಆರೋಪಿ ಎತ್ತಿಕೊಂಡು ತಲೆಯ ಭಾಗಕ್ಕೆ ಹೊಡೆದಿದ್ದು, ಚಾಸಾ. 6 ರವರಿಗೆ 6 ನೇ ಆರೋಪಿ ಕಲ್ಲನ್ನು ಬೀಸಿದಾಗ ಕಲ್ಲು ಹಣೆಯ ಮುಂಭಾಗಕ್ಕೆ ಬಿದ್ದು ರಕ್ತಗಾಯವಾಯಿತು, ಚಾಸಾ. 7 ರವರಿಗೆ 7 ನೇ ಆರೋಪಿ ಕಲ್ಲನ್ನು ಬೀಸಿದಾಗ ಹಣೆಗೆ ಪೆಟ್ಟಾಗಿ ರಕ್ತಗಾಯವಾಯಿತು, ಚಾಸಾ.8 ರವರಿಗೆ 8 ನೇ ಆರೋಪಿ ಕಲ್ಲನ್ನು ಬೀಸಿದಾಗ ಎಡ ಕಾಲಿನ ಮಧ್ಯ ಭಾಗಕ್ಕೆ ಬಿದ್ದು ರಕ್ತಗಾಯವಾಯಿತು, ಚಾಸಾ. 9 ರವರಿಗೆ 9 ನೇ ಆರೋಪಿ ಕಲ್ಲನ್ನು ಬೀಸಿದಾಗ ತಲೆಯ ಭಾಗಕ್ಕೆ ಬಿದ್ದು ರಕ್ತಗಾಯವಾಗಿದ್ದು ಚಾಸಾ. 10 ರವರಿಗೆ 10 ನೇ ಆರೋಪಿ "ತಳ್ಳಿದಾಗ ಕೆಳಕ್ಕೆ ಬಿದ್ದು ಎಡ ಕೆನ್ನೆಗೆ ರಕ್ತಗಾಯವಾಗಿರುತ್ತದೆ, ಚಾಸಾ.11 ರವರಿಗೆ 11 ನೇ ಆರೋಪಿ ಕೆಳಕ್ಕೆ ಕೆಡವಿಕೊಂಡಾಗ ಎಡ ಕಾಲು ಮತ್ತು ಹಣೆಯ ಭಾಗಕ್ಕೆ ರಕ್ತಗಾಯವಾಗಿದ್ದು, ಚಾಸಾ. 12 ರವರಿಗೆ 12 ನೇ ಆರೋಪಿ ಕೆಳಕ್ಕೆ ಕೆಡವಿಕೊಂಡಾಗ ಮೇಲ್ಭಾಗದ ತುಟಿಗೆ ರಕ್ತಗಾಯವಾಗಿದ್ದು, ಚಾಸಾ.13 ರವರನ್ನು 13 ನೇ ಆರೋಪಿ ರವರು ತಳ್ಳಿದಾಗ ಕೆಳಕ್ಕೆ ಬಿದ್ದಾಗ ಹಣೆಯ ಮುಂಭಾಗಕ್ಕೆ ರಕ್ತಗಾಯವಾಯಿತು.ಉಳಿದ ಆರೋಪಿ 14 ರಿಂದ 25 ರವರು ಅಕ್ರಮ ಕೂಟದ ಸದಸ್ಯರಾಗಿ ದೊಂಬಿ ಗಲಾಟೆಯಲ್ಲಿ ಭಾಗಿಯಾಗಿದ್ದು ಚಾಸಾ. 1,3 ಮತ್ತು 4 ರಿಂದ 13 'ರವರಿಗೆ "ಸಾಮಾನ್ಯ ಸ್ವರೂಪದ ಹಾಗೂ ಚಾಸಾ.2 ರವರಿಗೆ "ತೀವ್ರ ಸ್ವರೂಪದ" ಗಾಯವನ್ನುಂಟು ಮಾಡಿರುತ್ತಾರೆ ಎಂದು ಕವಲಂದೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಆರೋಪಿತರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ದೋಷಾರೋಪಣೆ ಪತ್ರ ಸಲ್ಲಿಕೆಯಾದ ನಂತರದಲ್ಲಿ ನ್ಯಾಯಾಲಯವು

ಭಾ.ದಂ.ಸಂಹಿತೆ ಕಲಂ. 143,147,148,324,326,323 ಸಹವಾಚಕ ಕಲಂ.149 ಕ್ಕೆ ಸಂಬಂಧಿಸಿದಂತೆ ಸಂಜ್ಞೆಯತೆಯನ್ನು ತೆಗೆದುಕೊಂಡಿರುತ್ತದೆ. ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದೋಷಾರೋಪಣ ಪತ್ರ ಸಲ್ಲಿಕೆಯಾದ ನಂತರ ದಂಡ ಪ್ರಕ್ರಿಯಾ ಸಂಹಿತೆಯ ಕಲಂ.207 ರಡಿಯಲ್ಲಿ ಅವಶ್ಯವಿರುವ ಕಟ್ಲೆ ದಾಖಲೆಗಳನ್ನು ಆರೋಪಿತರಿಗೆ ಒದಗಿಸಲಾಯಿತು. ಅಭಿಯೋಜನೆ ಮತ್ತು ಆರೋಪಿತರ ಪರ ವಕೀಲರ ವಾದಗಳನ್ನು ಕೇಳಿದ ನಂತರ ದೋಷಾರೋಪಣೆಯನ್ನು ತಯಾರು ಮಾಡಿ ಆರೋಪಿತರಿಗೆ ಓದಿ ಹೇಳಲಾಯಿತು. ಆರೋಪಿತರು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕೆಂದು ಕೋರಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಪ್ರಕರಣದ ವಿಚಾರಣೆಯ ಸಮಯದಲ್ಲಿ 1 ಮತ್ತು 5 ನೇ ಆರೋಪಿತರು ಮೃತಪಟ್ಟಿದ್ದು, ಅವರ ವಿರುದ್ಧದ ಪ್ರಕರಣವನ್ನು ಕೊನೆಗಾಣಿಸಲಾಗಿರುತ್ತದೆ.

4. ಅಭಿಯೋಜನೆಯವರ ಪರವಾಗಿ ದೋಷಾರೋಪಣಾ ಪತ್ರದಲ್ಲಿ ತೋರಿಸಿರುವ 24 ಜನ ಸಾಕ್ಷಿದಾರರ ಪೈಕಿ 9 ಜನ ಸಾಕ್ಷಿದಾರರನ್ನು ವಿಚಾರಿಸಿಕೊಂಡು, 10 ದಾಖಲಾತಿಗಳನ್ನು ನಿಶಾನೆಯಾಗಿ ಗುರುತಿಸಿಕೊಳ್ಳಲಾಗಿರುತ್ತದೆ.

5. ಸಾಕ್ಷ್ಯ ವಿಚಾರಣೆ ಮುಗಿದ ನಂತರದಲ್ಲಿ, ಆಪಾದಿತರ ವಿರುದ್ಧ ಆಪಾದಿಸುವಂತಹ ಯಾವುದೇ ಸಾಕ್ಷ್ಯ ಇರದ ಕಾರಣ ದಂ.ಪ್ರ.ಸಂಹಿತೆ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆಯನ್ನು ಮನ್ನಾ ಮಾಡಲಾಯಿತು.

6. ಉಭಯ ಪಕ್ಷಗಾರರ ಪರ ವಾದ ಕೇಳಲಾಯಿತು.

7. ಆರೋಪಿತರು ಎಸಗಿದ್ದಾರೆ ಎನ್ನಲಾದ ಆರೋಪಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗಿದೆ.

**ಅಂಶಗಳು**

1. ದಿಃ01.03.2016 ರಂದು ಮಧ್ಯಾಹ್ನ 03.00 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹಳೇಪುರ ಗ್ರಾಮದಲ್ಲಿ ಉಪ್ಪಾರಶೆಟ್ಟರು ಮತ್ತು ನಾಯಕರು ಮಾರಿಹಬ್ಬ ಆಚರಣೆಮಾಡುತ್ತಿದ್ದು ಪ್ರತ್ಯೇಕವಾಗಿ ಮೆರವಣಿಗೆ ಮಾಡಿದ್ದು ಎರಡೂ ಗುಂಪಿನ ಮೆರವಣಿಗೆ ಗ್ರಾಮದ ಹಳೇಪುರ ಸರ್ಕಲ್ ಬಳಿಗೆ ಬಂದಾಗ ಆರೋಪಿತರು ಹಲ್ಲೆ ಮಾಡುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.143 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

2. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಕೂಗಾಡಿಕೊಂಡು ದಾಂದಲೆ ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.147 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

3. ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು, ಕೈಗಳಲ್ಲಿ ಮಾರಣಾಂತಿಕ ಆಯುಧಗಳಾದ ಕಲ್ಲುಗಳನ್ನು ಹಿಡಿದುಕೊಂಡು ದೊಂಬಿ ಮಾಡಿರುತ್ತಾರೆ. ಆದ್ದರಿಂದ

ಆರೋಪಿತರು ಭಾ.ದಂ.ಸಂ.ಕಲಂ.148 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

4 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ,ಆರೋಪಿತರು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆ ಪೈಕಿ 1 ನೇ ಆರೋಪಿಯು ಕೈಯಲ್ಲಿ ಹಿಡಿದಿದ್ದ ದೊಣ್ಣೆಯಿಂದ ಚಾಸಾ-1 ರವರ ಬಲದ ಹಣೆ ಮತ್ತು ಮೈಕೈಗೆ, 3 ನೇ ಆರೋಪಿಯು ದೊಣ್ಣೆಯಿಂದ ಚಾಸಾ-3 ರವರ ಎದೆಗೆ, 4 ನೇ ಆರೋಪಿಯು ಕಲ್ಲನ್ನು ಬೀಸಿದಾಗ ಚಾಸಾ-4 ರವರ ಬಲ ಮಂಡಿಗೆ ಬಿದ್ದು ಗಾಯವಾಗಿದ್ದು, 5 ನೇ ಆರೋಪಿಯು ಕಲ್ಲಿನಿಂದ ಚಾಸಾ-5 ರವರ ತಲೆಯ ಭಾಗಕ್ಕೆ ಹೊಡೆದಿದ್ದು, 6 ನೇ ಆರೋಪಿಯು ಕಲ್ಲನ್ನು ಬೀಸಿದಾಗ ಚಾಸಾ-6 ರವರ ಹಣೆಯ ಮುಂಭಾಗಕ್ಕೆ ಬಿದ್ದು ಗಾಯವಾಗಿದ್ದು, 7 ನೇ ಆರೋಪಿಯು ಕಲ್ಲನ್ನು ಬೀಸಿದಾಗ ಚಾಸಾ-7 ರವರ ಹಣೆಗೆ ಬಿದ್ದು ಪೆಟ್ಟಾಗಿದ್ದು, 8 ನೇ ಆರೋಪಿಯು ಕಲ್ಲನ್ನು ಬೀಸಿದಾಗ ಚಾಸಾ-8 ರವರ ಎಡಗಾಲಿನ ಮಧ್ಯ ಭಾಗಕ್ಕೆ ಬಿದ್ದು ಗಾಯವಾಗಿದ್ದು, 9 ನೇ ಆರೋಪಿಯು ಕಲ್ಲನ್ನು ಬೀಸಿದಾಗ ಚಾಸಾ-9 ರವರ ತಲೆಯ ಭಾಗಕ್ಕೆ ಬಿದ್ದು ಗಾಯವಾಗಿ ಸ್ವಯಂ ಪ್ರೇರಿತವಾಗಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.324 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

5 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ, ಆರೋಪಿತರು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆ ಪೈಕಿ 10 ನೇ ಆರೋಪಿಯು ಚಾಸಾ-10 ರವರನ್ನು ತಳ್ಳಿದಾಗ ಅವರ ಎಡ ಕೆನ್ನೆಗೆ, 11 ನೇ ಆರೋಪಿಯು

ಚಾಸಾ-11 ರವರನ್ನು ಕೆಳಕ್ಕೆ ಕೆಡವಿಕೊಂಡಾಗ ಅವರ ಎಡಗಾಲು ಮತ್ತು ಹಣೆಯ ಭಾಗಕ್ಕೆ, 12 ನೇ ಆರೋಪಿಯು ಚಾಸಾ-12 ರವರನ್ನು ತಳ್ಳಿದಾಗ ಅವರ ಮೇಲ್ಭಾಗದ ತುಟಿಗೆ ಮತ್ತು 13 ನೇ ಆರೋಪಿಯು ಚಾಸಾ-13 ರವರನ್ನು ತಳ್ಳಿದಾಗ ಅವರ ಹಣೆಯ ಮುಂಭಾಗಕ್ಕೆ ಸ್ವಯಂ ಪ್ರೇರಿತವಾಗಿ ಸಾಮಾನ್ಯ ಸ್ವರೂಪದ ರಕ್ತಗಾಯಗಳನ್ನುಂಟುಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.323 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

6 ಮೇಲ್ಕಂಡ ದಿನಾಂಕ, ವೇಳೆ ಹಾಗೂ ಸ್ಥಳದಲ್ಲಿ,ಆರೋಪಿತರು ಅಪರಾಧವನ್ನು ಎಸಗುವ ಏಕೋದ್ದೇಶದಿಂದ ಅಕ್ರಮ ಗುಂಪು ಕಟ್ಟಿಕೊಂಡು ಬಂದು, ಆ ಪೈಕಿ 2 ನೇ ಆರೋಪಿಯು ಕೈಯಲ್ಲಿ ಹಿಡಿದಿದ್ದ ಕಲ್ಲನ್ನು ಸ್ವಯಂ ಪ್ರೇರಿತವಾಗಿ ಬೀಸಿದಾಗ ಚಾಸಾ-4 ರವರ ಮೂರು ಹಲ್ಲುಗಳು ಬಿದ್ದು ಸಡಿಲಗೊಂಡು ತೀವ್ರ ಸ್ವರೂಪದ ಗಾಯಗಳನ್ನುಂಟು ಮಾಡಿರುತ್ತಾರೆ. ಆದ್ದರಿಂದ ಆರೋಪಿತರು ಭಾ.ದಂ.ಸಂ.ಕಲಂ.326 ಸಹವಾಚಕ ಕಲಂ.149 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದನ್ನು ಅಭಿಯೋಜನೆಯವರು ರುಜುವಾತುಪಡಿಸುವರೇ ?

7 ಮಾಡುವ ಆದೇಶ ಏನು?

8. ಮೇಲಿನ ಅಂಶಗಳಿಗೆ ನಾನು ಈ ಕೆಳಗೆ ನೀಡಿರುವ ಕಾರಣಗಳಿಗಾಗಿ ಕೆಳಕಂಡಂತೆ ಉತ್ತರಿಸುತ್ತೇನೆ.

**ಅಂಶ-1 ರಿಂದ 6** **:ನಕಾರಾತ್ಮಕವಾಗಿ.**

**ಅಂಶ-7** **: ಅಂತಿಮ ಆದೇಶದಂತೆ.**

**ಈ ಕೆಳಕಂಡ ಕಾರಣಗಳಿಂದ:**

## ಕಾರಣಗಳು

9. **ಅಂಶ 1 ರಿಂದ 6:-** ಈ ಎಲ್ಲಾ ಅಂಶಗಳು ಒಂದೇ ಘಟನೆಯಲ್ಲಿ ನಡೆದ ಹಲವು ಅಪರಾಧಗಳಿಗೆ ಸಂಬಂಧಿಸಿದವುಗಳಾಗಿರುವುದರಿಂದಲೂ ಮತ್ತು ಅವುಗಳಿಗೆ ನೀಡಲಾಗುವ ಕಾರಣಗಳು ಪುನರಾವರ್ತನೆಯಾಗುವುದನ್ನು ತಡೆಯುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ಎತ್ತಿಕೊಳ್ಳಲಾಗಿದೆ.

10. ದೋಷಾರೋಪಣಾ ಪತ್ರದಲ್ಲಿ ಚಾಸಾ.1 ಪಿರ್ಯಾದಿ ಮತ್ತು ಗಾಯಾಳು ಎಂದು, ಚಾಸಾ.4 ರಿಂದ 7, 10,13 ರವರನ್ನು ಗಾಯಾಳುಗಳು ಮತ್ತು ಪ್ರತ್ಯಕ್ಷಸಾಕ್ಷಿದಾರರೆಂದು ಮತ್ತು 2 ಮತ್ತು 3 ಮಹಜರ್ ಸಾಕ್ಷಿದಾರರೆಂದು ನಮೂದಿಸಿದ್ದು, ಅಭಿಯೋಜನೆಯ ಪರವಾಗಿ ಚಾಸಾ-1 ರಿಂದ 7, 10,13 ರವರನ್ನು ಪ್ರಾಸಾ-1 ರಿಂದ 9 ಎಂದು ವಿಚಾರಿಸಿಕೊಳ್ಳಲಾಗಿದ್ದು, ಪ್ರಾಸಾ-1 ರಿಂದ 9 ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ತಮಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ, ತಾವು ಯಾವುದೇ ದೂರು, ಮರುಹೇಳಿಕೆ ಮತ್ತು ಹೇಳಿಕೆ ನೀಡಿಲ್ಲ, ತಮ್ಮ ಸಮಕ್ಷಮ ಯಾವುದೇ ಮಹಜರ್ ಜರುಗಿಸಿಲ್ಲ ಮತ್ತು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದು ಸಾಕ್ಷ್ಯ ನುಡಿದು ಅಭಿಯೋಜನಾ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿದಾರರಾಗಿ ಪರಿಣಮಿಸಿರುತ್ತಾರೆ.

11. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ರಿಂದ 9 ರವರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿದ್ದಾಗ್ಯೂ ಕೂಡ ಅವರಿಂದ ಅಭಿಯೋಜನಾ ಪ್ರಕರಣಕ್ಕೆ ಉಪಯುಕ್ತವಾಗುವಂತಹ ಯಾವುದೇ ಮಾಹಿತಿ

ಹೊರಬಂದಿರುವುದಿಲ್ಲ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-1 ರವರಿಗೆ ತಾವು ನಿಶಾನೆ ಪಿ-1 ರಂತೆ ಪೊಲೀಸರಿಗೆ ದೂರು ನೀಡಿದ್ದೀರಿ ಮತ್ತು ನಿಪಿ.3 ರಂತೆ ಹೇಳಿಕೆ ನೀಡಿದ್ದೀರಿ ಎಂದು ಮಾಡಿದ ಸಲಹೆಗಳನ್ನು ಪ್ರಾಸಾ-1 ರವರು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-2 ರವರಿಗೆ ತಾವು ನಿಶಾನೆ ಪಿ-2 ರಂತೆ ಪೊಲೀಸರು ದಿಃ07.04.2016 ರಂದು ಚಾಸಾ.1 ರವರು ಘಟನಾ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಮಧ್ಯಾಹ್ನ 14 ರಿಂದ 15.00 ಗಂಟೆವರೆಗೆ ಮಹಜರ್ ಜರುಗಿಸಿ ಕಲ್ಲನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಮತ್ತು ತಾವು ನಿಪಿ4 ರಂತೆ ಹೇಳಿಕೆ ನೀಡಿರುತ್ತೀರಿ ಎಂದು ಮಾಡಿದ ಸಲಹೆಗಳನ್ನು ಪ್ರಾಸಾ-2 ರವರು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ. ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-4 ರಿಂದ 9 ರವರಿಗೆ ತಾವು ನಿಪಿ5 ರಿಂದ 10 ರಂತೆ ಹೇಳಿಕೆ ನೀಡಿರುತ್ತೀರಿ ಎಂದು ಮಾಡಿದ ಸಲಹೆಗಳನ್ನು ಪ್ರಾಸಾ-4 ರಿಂದ 9 ರವರು ಸ್ಪಷ್ಟವಾಗಿ ನಿರಾಕರಿಸಿರುತ್ತಾರೆ. ಆದರೆ ಪ್ರಾಸಾ-1 ರಿಂದ 9 ವರು ತಮ್ಮ ಪಾಟೀ ಸವಾಲಿನಲ್ಲಿ ತಾವು ಮತ್ತು ಆರೋಪಿತರು ಗ್ರಾಮದ ಹಿರಿಯರ ಸಮಕ್ಷಮ ರಾಜೀ ಮಾಡಿಕೊಂಡಿದ್ದೇವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಕಾರಣದಿಂದಾಗಿ ಪ್ರಾಸಾ-1 ರಿಂದ 9 ರವರು ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ ನುಡಿದಿಲ್ಲ ಎನ್ನಲಡ್ಡಿಯಿಲ್ಲ.

12. ಈ ಪ್ರಕರಣದಲ್ಲಿ ಗಾಯಾಳುಗಳು ಮತ್ತು ಪ್ರತ್ಯಕ್ಷದರ್ಶಿಗಳಾದ ಪ್ರಾಸಾ.1 ರಿಂದ 9 ರವರು ಅಭಿಯೋಜನಾ ಪ್ರಕರಣವನ್ನು ಸಮರ್ಥಿಸಿ ಸಾಕ್ಷ್ಯ ನುಡಿಯದ ಹಿನ್ನೆಲೆಯಲ್ಲಿ ಇತರೆ ಸಾಕ್ಷಿದಾರರನ್ನು ವಿಚಾರಿಸಿಕೊಂಡಾಗ್ಯೂ ಕೂಡಾ ಯಾವುದೇ ಉದ್ದೇಶ ಈಡೇರುವುದಿಲ್ಲ ಎನ್ನುವ ಕಾರಣಕ್ಕೆ ಸಹಾಯಕ ಸರ್ಕಾರಿ ಅಭಿಯೋಜಕರು ಇತರೆ ಸಾಕ್ಷಿದಾರರಿಗೆ ಪ್ರೊಸೆಸ್

ನೀಡಬೇಕೆನ್ನುವ ಕೋರಿಕೆಯನ್ನು ತಿರಸ್ಕರಿಸಿ ಇತರೆ ಸಾಕ್ಷಿದಾರರನ್ನು ಸಾಕ್ಷ್ಯ ವಿಚಾರಣೆಯಿಂದ ಕೈಬಿಡಲಾಗಿರುತ್ತದೆ. ಒಟ್ಟಾರೆಯಾಗಿ ಅಭಿಯೋಜನಾ ಪ್ರಕರಣದ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿತರ ವಿರುದ್ಧ ಯಾವುದೇ ಆಪಾದನೆ ಇಲ್ಲದಿರುವುದರಿಂದ ಅವರುಗಳ ವಿರುದ್ಧ ಹೊರಿಸಲಾದ ದೋಷಾರೋಪಣೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆಂದು ನಿರ್ಣಯಿಸಿ ಹೆಚ್ಚಿನ ಚರ್ಚೆಗೆ ಅವಕಾಶ ನೀಡದೇ **ಅಂಶ-1 ರಿಂದ 6 ನ್ನು ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

13. **ಅಂಶ-7:-** ಈ ಮೇಲೆ ಚರ್ಚಿಸಿದ ಕಾರಣಗಳಿಗಾಗಿ ಅಭಿಯೋಜನೆಯವರು ಆರೋಪಿತರ ವಿರುದ್ಧ ಆಪಾದಿಸಲಾಗಿರುವಂತಹ ದೋಷಾರೋಪಣೆಗಳನ್ನು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಈ ಕೆಳಕಂಡಂತೆ ಆದೇಶ ಮಾಡಿರುತ್ತೇನೆ.

**-:: ಆದೇಶ ::-**

2 ರಿಂದ 10 ಮತ್ತು 12 ರಿಂದ 25 ನೇ ಆರೋಪಿತರನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರಡಿಯಲ್ಲಿ ಅವರ ವಿರುದ್ಧ ಹೊರಿಸಲಾದ ಭಾರತ ದಂಡ ಸಂಹಿತೆ ಕಲಂ.143,147,148,324,326,323 ಸಹವಾಚಕ ಕಲಂ.149 ರಡಿಯಲ್ಲಿನ ದೋಷಾರೋಪಣೆಗಳಿಂದ **ಖುಲಾಸೆ ಮಾಡಿ ಬಿಡುಗಡೆ ಮಾಡಲಾಗಿದೆ.**

2 ರಿಂದ 10 ಮತ್ತು 12 ರಿಂದ 25 ನೇ ಆರೋಪಿತರ ಮತ್ತು ಅವರ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ದಂ.ಪ್ರ.ಸಂ.ಕಲಂ.437-ಎ ರಂತೆ ಮುಂದಿನ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತವೆ.

ಪಿ.ಎಫ್.ನಂ.26/2016, ದಿಃ07.04.2016 ಕ್ರಮ ಸಂಃ 1 ರಲ್ಲಿ ನಮೂದಿಸಿರುವ ಒಂದು 3 ½ ಅಡಿ ಉದ್ದದ ಕಾಡುಜಾತಿಯ ದೊಣ್ಣೆ ಮತ್ತು ಕ್ರಮ ಸಂಃ2 ರಲ್ಲಿ ನಮೂದಿಸಿರುವ ಕೈ ಹಿಡಿ ಗಾತ್ರದ ಕಾಡು ಜಾತಿಯ ಕಲ್ಲು ನಿಷ್ಪ್ರಯೋಜಕ ಮತ್ತು ಮೌಲ್ಯರಹಿತ ವಸ್ತುಗಳಾಗಿರುವುದರಿಂದ ಅವುಗಳನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಯವರಿಗೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರ ಉಕ್ತಲೇಖನ ಕೊಟ್ಟು ಅವರಿಂದ ಬೆರಳಚ್ಚು ಮಾಡಿಸಿದ ನಂತರ ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ದಿಃ**05 ನೇ ಆಗಸ್ಟ್, 2026** ರಂದು ಆದೇಶವನ್ನು ಘೋಷಿಸಲಾಯಿತು.)

**(ಶ್ರೀಮತಿ.ಸರಿತ ಕುಮಾರಿ.ಎ.ಎಂ.)**
ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.

## -ಅನುಬಂಧ-

1. **ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ**

| | | |
|---|---|---|
| ಪ್ರಾಸಾ-1 | : | ಮಹದೇವಶೆಟ್ಟಿ |
| ಪ್ರಾಸಾ-2 | : | ಮಹದೇವ ಹೆಚ್ ಎಸ್ |
| ಪ್ರಾಸಾ-3 | : | ಕೃಷ್ಣ |
| ಪ್ರಾಸಾ-4 | : | ಪುಟ್ಟಸ್ವಾಮಿ |
| ಪ್ರಾಸಾ-5 | : | ರಾಜು |
| ಪ್ರಾಸಾ-6 | : | ಮಹದೇವ |
| ಪ್ರಾಸಾ-7 | : | ಚಿಕ್ಕಕೆಂಚಶೆಟ್ಟಿ |
| ಪ್ರಾಸಾ-8 | : | ವೆಂಕಟೇಶ |
| ಪ್ರಾಸಾ-9 | : | ರಾಜಮ್ಮ |

2. **ಅಭಿಯೋಜನಾ ಪರ ಗುರುತಿಸಲಾದ ದಾಖಲೆಗಳುಃ**

| | |
|---|---|
| ನಿಪಿ-1 | :ದೂರು |
| ನಿಪಿ-2 | :ಸ್ಥಳ ಮಹಜರ್ |
| ನಿಪಿ-2(ಎ-ಬಿ) | :ಸಹಿಗಳು |
| ನಿಪಿ-3 | :ಪ್ರಾಸಾ.1 ರವರ ಹೇಳಿಕೆ |
| ನಿಪಿ-4 | :ಪ್ರಾಸಾ.2 ರವರ ಹೇಳಿಕೆ |
| ನಿಪಿ-5 | :ಪ್ರಾಸಾ.4 ರವರ ಹೇಳಿಕೆ |
| ನಿಪಿ-6 | :ಪ್ರಾಸಾ.5 ರವರ ಹೇಳಿಕೆ |
| ನಿಪಿ-7 | :ಪ್ರಾಸಾ.6 ರವರ ಹೇಳಿಕೆ |
| ನಿಪಿ-8 | :ಪ್ರಾಸಾ.7 ರವರ ಹೇಳಿಕೆ |
| ನಿಪಿ-9 | :ಪ್ರಾಸಾ.8 ರವರ ಹೇಳಿಕೆ |
| ನಿಪಿ-10 | :ಪ್ರಾಸಾ.9 ರವರ ಹೇಳಿಕೆ |

3. **ಅಭಿಯೋಜನಾ ಪರ ಗುರುತಿಸಲಾದ ಮುದ್ದೆಮಾಲುಗಳುಃ**

- ಇಲ್ಲಾ -

4. **ಆರೋಪಿತರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ.**

- ಇಲ್ಲಾ -

5. **ಆರೋಪಿತರ ಪರ ಗುರುತಿಸಲಾದ ದಾಖಲೆಗಳುಃ**

- ಇಲ್ಲಾ -

ಒಂದನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು,
ನಂಜನಗೂಡು.